'ವಾಸ್ತವವಾಗಿ ಮೊದಲಿನಿಂದ ಗಂಭೀರ ಅಭ್ಯಾಸಕ್ಕೆ ಹೆಚ್ಚು ಗಮನ ಕೊಟ್ಟಿದ್ದರೆ ಇನ್ನಷ್ಟು ಗಾಢ ವ್ಯಕ್ತಿತ್ವ ಇರುತ್ತಿತ್ತೇನೋ.' 'ನಾನು ಬರೆಯುವ ಭಾಷೆಯ ಬಗ್ಗೆ ಅನುಮಾನ ಹುಟ್ಟುತ್ತಿದೆ. ಭಾಷೆ ಅನ್ನುವುದು ಸ್ವತಂತ್ರನಿಷ್ಠವಾದುದಲ್ಲ. ನಾನು ರೂಢಿಸಿಕೊಳ್ಳುವಂಥದು. ನನ್ನ ವ್ಯಕ್ತಿತ್ವ ಅದರ ಹಿಂದೆ ಇರುತ್ತದೆ' ಎಂದು ವಿಮರ್ಶಿಸಿಕೊಳ್ಳುವ ಡಿ.ಆರ್.ಗೆ 'ಭಾಷೆಯ ರಚನೆಯ ಅಷ್ಟು ಸೂಕ್ಷ್ಮ ಅಭ್ಯಾಸ ಇನ್ನೂ ಸಿದ್ಧಿಸಿಲ್ಲ' ಎಂದು 'ಭಾರತೀಪುರ' ಕುರಿತು ಬರೆಯುವಾಗ ಅನ್ನಿಸುತ್ತದೆ; 'ಡೈರಿಯಲ್ಲಿ ಬರೆಯುವಾಗ ಭಾಷೆ ಸಲೀಸಾಗಿ, ಸಂಭ್ರಮದಿಂದ ಉಕ್ಕುತ್ತದೆ; ಪ್ರಕಟಣೆಗೆಂದು ಬರೆಯುವಾಗ ಏಕೋ ಕುಂಟುತ್ತದಲ್ಲ' ಎಂದು ವಿಸ್ಮಯವಾಗುತ್ತದೆ. ತಮ್ಮ ಅನಿಸಿಕೆಗಳನ್ನು ಇಂಗ್ಲಿಷಿನಲ್ಲೂ ಬರೆಯುತ್ತಿದ್ದ ಅವರಿಗೆ ಒಂದು ಘಟ್ಟದಲ್ಲಿ ಇಂಗ್ಲಿಷಿನಲ್ಲಿ ಲೇಖನ ಬರೆಯಲಾರಂಭಿಸಿದಾಗ ಹೊಸ ಆತ್ಮವಿಶ್ವಾಸ ಹುಟ್ಟುತ್ತದೆ.

ಅದು ಇಪ್ಪತ್ತನೆಯ ಶತಮಾನದ ಎಪ್ಪತ್ತರ ದಶಕದ ಕರ್ನಾಟಕದ ತೀವ್ರ ವೈಚಾರಿಕ ಮಂಥನದ ಕಾಲಘಟ್ಟ. ಆ ಕಾಲದಲ್ಲಿ ದಾಖಲಾಗುತ್ತಿದ್ದ ಈ ಟಿಪ್ಪಣಿಗಳು ತಾರುಣ್ಯಕ್ಕೆ ಅಡಿಯಿಕ್ಕುತ್ತಿರುವ ಕಡುಜಾಣ ವಿದ್ಯಾರ್ಥಿಯೊಬ್ಬನ ಆಳದ ಹುಡುಕಾಟ, ಗೊಂದಲ, ತಲ್ಲಣ, ಸಾಮರ್ಥ್ಯ ಎಲ್ಲವನ್ನೂ ಸೂಚಿಸುತ್ತವೆ. ನಿಷ್ಠುರ ಸ್ವ–ಟೀಕೆಗಳು, ತಿದ್ದಿಕೊಳ್ಳುವ ಕಾತರಗಳೂ ಇಲ್ಲಿವೆ: 'ಈ ಹಳಹಳಿಕೆಯ ಪ್ರವೃತ್ತಿ ಆರೋಗ್ಯಕರವಾದುದಲ್ಲ'; 'ದೈಹಿಕ ಅಸ್ವಸ್ಥತೆಗಿಂತ ಮಾನಸಿಕ ಗೋಸುಂಬೆತನ–ಹಗಲುಗನಸಿನ ಪ್ರವೃತ್ತಿಯೇ (ಈ ಅಸ್ವಸ್ಥತೆಗೆ) ಕಾರಣ. ಇದರಿಂದ ಒಂದೆರಡು ದಿನಗಳಲ್ಲಿ ಬಚಾವಾಗದೆ ಹೋದರೆ ಬೇರೆ ಮಾರ್ಗವೇ ಇಲ್ಲ.' 'ಎಲ್ಲವೂ ಕೈಗೆ ಹತ್ತಿದೆ–ಆದರೆ ಏನನ್ನೂ ಅರಗಿಸಿಕೊಂಡಿಲ್ಲ... ಏಕೆ ಗೊತ್ತೆ–ಪಠ್ಯಗಳನ್ನು ಓದುವಾಗ ಆಳಕ್ಕಿಳಿಯದೆ ಬರೀ ಓದುತ್ತಾ ಹೋಗುತ್ತೇನೆ, ಇನ್ನೊಂದು ಬಾರಿ ಓದಿದಾಗ ಅರಗಿಸಿಕೊಳ್ಳಬಲ್ಲೆ ಎಂದು. ಆದರೆ, ಇದೊಂದು ಚಕ್ರವಾಗಿಬಿಟ್ಟಿದೆ. ಇದರಿಂದ ಆದಷ್ಟು ಬೇಗ ಪಾರಾಗಬೇಕು.' 'ಮನಸ್ಸನ್ನು ಜಡತೆಯಿಂದ ಬಿಡಿಸಿಕೊಳ್ಳಲು ಹೋರಾಡುತ್ತಿದ್ದೇನೆ. ಕ್ಷಣಿಕ ಹರಟೆ, ಕಸಕಡ್ಡಿ ಮನಸ್ಸನ್ನು ಮುಚ್ಚಿ ನಿಜದ ಬಿಸಿಲು ಬೀಳದಂತೆ ಮರೆ ಮಾಡುತ್ತದೆ.' 'ನಾರ್ಸಿಸಿಸ್ ಮನೋಭಾವ ನನ್ನಲ್ಲಿ ಹೆಚ್ಚಾಗುತ್ತಿದೆ...'

ಬೆಂಗಳೂರಿನ ಸಂಪರ್ಕಕ್ಕೆ ಬಂದ ಹಿಂದುಳಿದ ವರ್ಗದ ಹುಡುಗನೊಬ್ಬ ಜಗತ್ತಿನ ಹೊಸ ಸಿದ್ಧಾಂತಗಳನ್ನು ಅರಿಯಲೆತ್ನಿಸುತ್ತಿರುವ, ಸಾಹಿತ್ಯ ವಿಮರ್ಶೆಯ ಉಪಕರಣಗಳ ಬಳಕೆಯಲ್ಲಿ ಖಚಿತವಾಗುತ್ತಿರುವ, ಬುದ್ಧಿಜೀವಿ–ಚಿಂತಕ–ಲೇಖಕನಾಗಿ ರೂಪುಗೊಳ್ಳುತ್ತಿರುವ ಸಂಕೀರ್ಣ ಪ್ರಕ್ರಿಯೆಯ ಪ್ರಾತಿನಿಧಿಕ ರೂಪವೂ ಇಲ್ಲಿದೆ. ಸಾಹಿತ್ಯ, ಸಮಾಜವಾದಿ ಯುವಜನ ಸಭಾ, ಜೆಪಿ ಚಳವಳಿ, ಕಮ್ಯುನಿಸ್ಟ್ ಚಿಂತನೆಗಳ ಸಂಗದಲ್ಲಿ ಬೆಳೆಯುತ್ತಿದ್ದ, 'ಸೆಲ್ಫ್ ಮೇಡ್' ಎನ್ನಬಹುದಾದ, ಅನನ್ಯ ಚಿಂತಕನೊಬ್ಬನ ಅರಳುವಿಕೆಯನ್ನು ತೋರಿಸುವ ಈ ಪಯಣ ಕನ್ನಡ, ಇಂಗ್ಲಿಷ್ ಅಥವಾ ಇನ್ಯಾವುದೇ ವಿಭಾಗಗಳಲ್ಲಿ ಅಧ್ಯಯನ, ಸಂಶೋಧನೆ ಮಾಡುತ್ತಿರುವವರಿಗೆಲ್ಲ ಮಾರ್ಗದರ್ಶಕವಾಗಬಲ್ಲದು.

ಹದಿಹರೆಯದಲ್ಲೇ ಕನ್ನಡದ ಉತ್ತಮ ಸಾಹಿತ್ಯ ಕೃತಿಗಳ ಸಂಗದಲ್ಲಿದ್ದ ಡಿ.ಆರ್. ನಿತ್ಯದ ರೈಲು ಪ್ರಯಾಣವನ್ನು ಗಂಭೀರ ಓದಿನ ಸಮಯವನ್ನಾಗಿಸಿಕೊಂಡರು; ಅಲ್ಲಿ ಅಸಲಿ ಗ್ರಾಮೀಣ ಭಾರತವನ್ನು ಕಂಡರು: 'ಇಲ್ಲಿ ಕಾಣುವ ಪ್ರತಿಯೊಬ್ಬರೂ ಇಂಡಿಯಾದ ಅಗಾಧ ದಾರಿದ್ರ್ಯದ ಅಸ್ಥಿಪಂಜರವಾಗಿ ಕಾಣುತ್ತಾರೆ.' ಇನ್ನೊಮ್ಮೆ ಅವರಿಗೆ, 'ಈ ದೇಶದ ರಾಜಕೀಯ ಬಹುಸಂಖ್ಯಾತ ಜನಸಮುದಾಯಕ್ಕೆ ತೀರಾ ಅಪ್ರಸ್ತುತ. ಆಳುವ ವರ್ಗ ಶಿಕ್ಷಣ ಪದ್ಧತಿಯ ಮೂಲಕ ವಿದ್ಯಾವಂತರನ್ನು ನಿಷ್ಕ್ರಿಯರನ್ನಾಗಿ ಮಾಡುತ್ತಿರುವುದೇ ಇಲ್ಲಿನ ಲಕ್ಷಣ' ಎನ್ನಿಸುತ್ತದೆ. ಡಿ.ಆರ್. ಅವರ ಗೆಳೆಯ ಕರಿಗೌಡ ಬೀಚನಹಳ್ಳಿ ನೆನೆಯುವಂತೆ, 'ಡಿ.ಆರ್. ಕೆಲವೊಮ್ಮೆ ಬೆಂಗಳೂರಿನ ಬಂಡಿಶೇಷಮ್ಮ ಹಾಸ್ಟೆಲಿನಲ್ಲಿ ಗೆಳೆಯನೊಬ್ಬನಿಗೆ ನಿಗದಿಯಾಗಿದ್ದ ರೂಮಿನಲ್ಲೋ, ಕಮ್ಯುನಿಸ್ಟ್ ಲೇಖಕ ಶಂಕರ ಲಾಳಾಪುರ್ ಜೊತೆ 'ಕೆಂಬಾವುಟ'